ಇ) ಈವರೆಗೆ ಉಡುಪಿ ಜಿಲ್ಲೆಯಲ್ಲಿ 19 48 ಕಿ ಮೀ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 8 21 ಕಿ ಮೀ ಉದ್ದಕ್ಕೆ ಕಲ್ಲಿನಿಂದ ತಡೆಗೋಡೆ ನಿರ್ಮಿಸಲಾಗಿದೆ

ಪ್ರಸ್ತುತ ವರ್ಷ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಸುಮಾರು 3354 ಮೀ ಉದ್ದಕ್ಕೆ ತುರ್ತು ಸಂರಕ್ಷಣೆ ಕ್ರಮವಾಗಿ ಮರಳು ಚೀಲಗಳ ಬಂಡಿಂಗ್ ಹಾಗೂ ಕಲ್ಲುಗಳ ತಾತ್ಕಾಲಿಕ ತಡೆಗೋಡೆಗಳನ್ನು ನಿರ್ಮಿಸಿ ಸಾರ್ವಜನಿಕ ಆಸ್ತಿಪಾಸ್ತಿ ರಕ್ಷಣೆ ಮಾಡಲಾಗಿರುತ್ತದೆ

ಈ) ಕುಂದಾಪುರ ತಾಲ್ಲೂಕಿನ ಪಡುವರಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ 1170 ಮೀ ಉದ್ದಕ್ಕೆ ವಿನ್ಯಾಸದಂತೆ ಕಲ್ಲಿನಿಂದ ತಡೆಗೋಡೆ ನಿರ್ಮಿಸುವ ಕಾಮಗಾರಿ ಪ್ರಾರಂಭ ಹಂತದಲ್ಲಿದೆ "ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆಯಡಿ" (National Coastal Protection Project) ರೂ 136 00 ಕೋಟಿ (ರೂ 292 00 ಕೋಟಿ ಪರಿಷ್ಕೃತ) ಅಂದಾಜು ವೆಚ್ಚದಲ್ಲಿ ಸುಮಾರು 50 ಕಿ ಮೀ ಉದ್ದಕ್ಕೆ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ

ಮಂಗಳೂರು ತಾಲ್ಲೂಕಿನ ಉಳ್ಳಾಲದಲ್ಲಿ ರೂ 45 25 ಕೋಟಿ ಅಂದಾಜಿನಲ್ಲಿ "T" ಗ್ರಾಯನ್ಸ್ ನಿರ್ಮಿಸುವ ಪ್ರಸ್ತಾವನೆ ಅಥವಾ ರೂ 8 3 ಕೋಟಿ ಅಂದಾಜು ವೆಚ್ಚದಲ್ಲಿ ಸ್ಪೆಬಿಪ್ಲೇಜ್ ತಂತ್ರಜ್ಞಾನವನ್ನು ಅಳವಡಿಸಿ ಸಮುದ್ರ ಕೊರೆತ ತಡೆಗಟ್ಟುವ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಕೇರಳ ಮಾದರಿಯ ಶಾಶ್ವತ ಪರಿಹಾರದ ಯಾವುದೆ ಪ್ರಸ್ತಾವನೆ ಪರಿಶೀಲನೆಯಲ್ಲಿ ಇರುವುದಿಲ್ಲ

943 (906) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಕಾರ್ಮಿಕ, ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಕೇಂದ್ರ ಸರ್ಕಾರವು 2000ನೇ ಇಸವಿಯಲ್ಲಿ ರಾಷ್ಟ್ರವ್ಯಾಪ್ತಿ ಮನಿಸಾನ ಸಿಂಗ್ ವೇತನ ಆಯೋಗದ ಶಿಫಾರಸ್ಸಿನ ಮೂಲಕ ಪತ್ರಕರ್ತರ ಮತ್ತು ಪತ್ರಕರ್ತೆಯರ ನೌಕರರ ವೇತನ ಪರಿಷ್ಕರಣೆಗೆ ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹೌದಾದಲ್ಲಿ, ರಾಜ್ಯದ ಯಾವ ಯಾವ ಪತ್ರಿಕಾ ಸಂಸ್ಥೆಗಳು ತಮ್ಮ ನೌಕರರಿಗೆ ವೇತನ ಪರಿಷ್ಕರಣೆ ಮಾಡಿವೆ,

ಇ) ಮಣಿಪಾಲದ ಉದಯವಾಣಿ ಪತ್ರಿಕೆ ತನ್ನ ನೌಕರರಿಗೆ ಈ ಸೌಲಭ್ಯವನ್ನು ಜಾರಿಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಅಂತಹ ಸಂಸ್ಥೆಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು,

ಉ) ಪರಿಷ್ಕೃತ ವೇತನ ಸೌಲಭ್ಯವನ್ನು ಸಂಬಂಧಿಸಿದವರಿಗೆ ಜಾರಿಗೊಳಿಸುವ ಬಗ್ಗೆ 2003ರಲ್ಲಿ ಕಾರ್ಮಿಕ ಆಯುಕ್ತರ ನೇತೃತ್ವದಲ್ಲಿ ಸರ್ಕಾರ ನೇಮಿಸಿದ ಸಮಿತಿಯು ನೀಡಿದ ವರದಿಯಲ್ಲಿನ ಶಿಫಾರಸ್ಸುಗಳಾವುವು,

ಊ) ಈ ವರದಿಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ, ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಪೂರ್ತಿ ಜಾರಿಯಾಗಿರುವುದು–36
ಭಾಗಶಃ ಜಾರಿಯಾಗಿರುವುದು–30
ಒಟ್ಟು ಸಂಸ್ಥೆಗಳು –66
ಈ ಬಗ್ಗೆ ಪಟ್ಟಿ ಲಗತ್ತಿಸಿದೆ

ಇ) ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಈ) ಮನಿಸಾನ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಕೇಂದ್ರ ಸರ್ಕಾರವು ದಿ 5–12–2000 ಮತ್ತು 15–12–2000ರಂದು ಹೊರಡಿಸಿದ್ದ ಆದೇಶಗಳನ್ನು ಉದಯವಾಣಿ ಪತ್ರಿಕಾ ಸಂಸ್ಥೆಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಂ 28588/2001ರಲ್ಲಿ ಪ್ರಶ್ನಿಸಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯವು 1–2–2006 ರಂದು ಉದಯವಾಣಿ ಪತ್ರಿಕಾ ಸಂಸ್ಥೆಯವರು ರಿಟ್ ಅರ್ಜಿಯನ್ನು ಮರಸ್ಕರಿಸಿ, ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ರದ್ದುಪಡಿಸಿರುತ್ತದೆ ಈ ವಿಷಯದಲ್ಲಿ ಉದಯವಾಣಿ ಪತ್ರಿಕಾ ಸಂಸ್ಥೆಗೆ ಸೂಕ್ತ ಅವಕಾಶವನ್ನು ಕೊಟ್ಟು, ಮನಿನಾನ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುವ ವಿಷಯದಲ್ಲಿ ಮರು ವಿಚಾರಣೆ ನಡೆಸಿ ಸೂಕ್ತ ಆದೇಶವನ್ನು ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ಆದೇಶವನ್ನು ಉಚ್ಚ ನ್ಯಾಯಾಲಯವು ನೀಡಿರುತ್ತದೆ ಆದಕಾರಣ, ಈ ಬಗ್ಗೆ ವಿಷಯ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿ ಇರುವುದರಿಂದ, ಮನಿಸಾನ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಈ ನಂಸ್ಥೆಗೆ ಇದುವರೆಗೆ ಅನುಷ್ಠಾನಗೊಳಿಸಲು ಸಾಧ್ಯ ಆಗಿರುವುದಿಲ್ಲ

ಊ) ಮನಿಸಾನ ವೇತನ ಮಂಡಳಿಯ ವೇತನ ಸೌಲಭ್ಯಗಳನ್ನು ಜಾರಿಗೊಳಿಸುವ ಬಗ್ಗೆ ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ತ್ರಿಪಕ್ಷೀಯ Monitoring ಸಮಿತಿಯು ರಚನೆಯಾಗಿದ್ದು, 5 ಸಭೆಗಳನ್ನು ನಡೆಸಲಾಗಿರುತ್ತದೆ ಈ ಸಭೆಯಲ್ಲಿ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಪತ್ರಿಕಾ ಸಂಸ್ಥೆಗಳು ಅನುಷ್ಠಾನ ಮಾಡುತ್ತಿರುವ ಬಗ್ಗೆ ಪರಿಶೀಲನೆ ಮಾಡಲಾಗಿರುತ್ತದೆ ಪತ್ರಕರ್ತರು ಹಾಗೂ ಪತ್ರಕರ್ತರಲ್ಲದ ನೌಕರರಿಗೆ ಸಂಬಂಧಪಟ್ಟಂತೆ ಮನಿಸಾನ ವೇತನ ಆಯೋಗದ ಪ್ರಕಾರ ಪಾವತಿ ಮಾಡಲಾಗುತ್ತಿರುವ ವೇತನದ ಬಗ್ಗೆ ಪತ್ರಿಕಾ ಸಂಸ್ಥೆಗಳಿಂದ ಮಾಹಿತಿಗಳನ್ನು ಕಾರ್ಮಿಕ ಇಲಾಖೆ ಪಡೆಯುವಂತೆ ತೀರ್ಮಾನಿಸಲಾಗಿರುತ್ತದೆ ವೇತನ ಜಾರಿಗೊಳಿಸುತ್ತಿರುವ ಬಗ್ಗೆ ಪರಿಶೀಲನೆ ಮಾಡಲು ಕೇಂದ್ರ ಸರ್ಕಾರದ ಆರ್ಥಿಕ ಸಲಹೆಗಾರರು, ಕಾರ್ಮಿಕ ಹಾಗೂ ಉದ್ಯೋಗ ಮಂತ್ರಾಲಯ, ನವದೆಹಲಿ ಇವರು ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಿಕಾ ಸಂಸ್ಥೆಗಳ ಹಾಗೂ ಕಾರ್ಮಿಕ ಸಂಘಗಳ ಸಭೆಯನ್ನು ನಡೆಸಲಾಯಿತು ವೇತನ ಮಂಡಳಿಯ ಶಿಫಾರಸ್ಸನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ತ್ರಿಪಕ್ಷೀಯ Monitoring ಸಮಿತಿಯ ಅಧ್ಯಕ್ಷತೆಯನ್ನು ಕಾರ್ಮಿಕ ಆಯುಕ್ತರ ಬದಲಾಗಿ ಮಾನ್ಯ ಕಾರ್ಮಿಕ ಸಚಿವರು ವಹಿಸಬೇಕೆಂದು ಹಾಗೂ ಇದರ ಬಗ್ಗೆ ರಾಜ್ಯ ಸರ್ಕಾರವು ಸರ್ಕಾರಿ ಆದೇಶವನ್ನು ಹೊರಡಿಸಬೇಕೆಂದು ಸೂಚಿಸಿದರು ಹಾಗೂ ವೇತನ ಸಮಿತಿಯ ಅನುಷ್ಠಾನದ ಬಗ್ಗೆ ಹೊಸ ನಮೂನೆಯಲ್ಲಿ ವಿವರಗಳನ್ನು ಪಡೆಯಬೇಕೆಂದು ತಿಳಿಸಿದರು

ಋ) ಕಾರ್ಮಿಕ ಆಯುಕ್ತರ ನೇತೃತ್ವದಲ್ಲಿ ಸರ್ಕಾರ ನೇಮಿಸಿದ ಸಮಿತಿಯು ನೀಡಿದ ವರದಿಯನ್ವಯ ಪತ್ರಿಕಾ ಸಂಸ್ಥೆಗಳಿಂದ ಮಾಹಿತಿಗಳನ್ನು ಪರಿಷ್ಕೃತ ನಮೂನೆಯಲ್ಲಿ ಪಡೆಯಲಾಗುತ್ತಿದೆ

ಇಲ್ಲದೆ, ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ತ್ರಿಪಕ್ಷೀಯ Monitoring ಸಮಿತಿಯನ್ನು ರಚಿಸಲಾಗಿದೆ ಈ ಸಮಿತಿಯಲ್ಲಿ ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘದ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ

ಅನುಬಂಧ-1

ಕ್ರ ಸಂ	ಪತ್ರಿಕಾ ಸಂಸ್ಥೆಗಳ ಹೆಸರು	ನಗರ	ಕಾರ್ಮಿಕರ ಸಂಖ್ಯೆ	ಮೂರ್ತಿ ಮತ್ತು ಭಾಗಶಃ ಜಾರಿಯಾಗಿರುವುದು
1	ಮೆ ಇ ಸಂಜೆ ದಿನಪತ್ರಿಕೆ, ನಂ 2/4, ಡಾ ರಾಜ್‌ಕುಮಾರ್ ರಸ್ತೆ, ಬೆಂಗಳೂರು	ಬೆಂಗಳೂರು	78	FI

ಕ್ರ ಸಂ	ಪತ್ರಿಕಾ ಸಂಸ್ಥೆಗಳ ಹೆಸರು	ನಗರ	ಕಾರ್ಮಿಕರ ಸಂಖ್ಯೆ	ಪೂರ್ತಿ ಮತ್ತು ಭಾಗಶಃ ಜಾರಿಯಾಗಿರುವುದು
2	ಅಭಿಮಾನಿ ಪ್ರಕಾಶನ, ನಂ 2/4, ಡಾ ರಾಜ್‌ಕುಮಾರ್ ರಸ್ತೆ, ಬೆಂಗಳೂರು	"	23	FI
3	ರಾಜಾಸ್ಥಾನ ಪತ್ರಿಕೆ (ಪ್ರೈ) ಲಿ, ನಂ 50/11, 2ನೇ ಮುಖ್ಯ ರಸ್ತೆ, ಇಂಡಸ್ಟ್ರಿಯಲ್ ಟೌನ್, ರಾಜಾಜಿನಗರ, ಬೆಂಗಳೂರು	"	14	PI
4	ಮನುಕುಲ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ ಲಿ, ಡಾ ಎಂ ಸಿ ಮೋದಿ ರಸ್ತೆ, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು	"	14	PI
5	ದಿ ಪ್ರಿಂಟರ್ಸ್ (ಮೈಸೂರು) (ಪ್ರೈ) ಲಿ, ನಂ 7212, ಕುಂಬ್ಲಗೋಡು, ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–74	"	252	FI
6	ಕನ್ನಡಪ್ರಭ, ಇಂಡಿಯನ್ ಎಕ್ಸ್‌ಪ್ರೆಸ್	"	450	FI

1	2	3	4	5
7	ದಿ ಹಿಂದು	"	123	FI
8	ಡೆಕನ್ ಹೆರಾಲ್ಡ್ – ಪ್ರಜಾವಾಣಿ	"	782	FI
9	ಸಂಯುಕ್ತ ಕರ್ನಾಟಕ, ಬೆಂಗಳೂರು	"	155	FI
10	ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು	"	161	FI
11	ಸಂಯುಕ್ತ ಕರ್ನಾಟಕ, ಕೋಪಿಕರ್ ರಸ್ತೆ, ಹುಬ್ಬಳ್ಳಿ	ಹುಬ್ಬಳ್ಳಿ	189	FI
12	ವಿಜಯ ಕರ್ನಾಟಕ, ಹುಬ್ಬಳ್ಳಿ	"	100	FI
13	ವಿಜಯ ಟ್ರೈಮ್ಸ್, ಹುಬ್ಬಳ್ಳಿ	"	60	FI
14	ಉಷಾ ಕಿರಣ್, ಹುಬ್ಬಳ್ಳಿ	"	50	FI
15	ಪ್ರಜಾವಾಣಿ	"	72	FI
16	ಡೆಕನ್ ಹೆರಾಲ್ಡ್, ಹುಬಳ್ಳಿ	"	70	FI
17	ಸಂಜೆ ದರ್ಪಣ	"	20	FI
18	ವಿಶ್ವವಾಣಿ	"	2	FI
19	ವಿಶ್ವವಿಜಯ್	"	2	FI
20	ನವೋದಯ ಕನ್ನಡ ಡೈಲಿ	"	2	FI
21	ವಿಜಯ ಕರ್ನಾಟಕ	ಮಂಗಳೂರು	58	PI
22	ಪ್ರಜಾವಾಣಿ	"	27	PI
23	ದಿ ಹಿಂದು	"	51	PI

1	2	3	4	5
24	ವಿಜಯಾನಂದ ಪ್ರಿಂಟರ್ಸ್	ಶಿವಮೊಗ್ಗ	60	PI
25	ಕನ್ನಡ ಪ್ರಭ	"	30	PI
26	ಉಷಾ ಕಿರಣ್	"	12	PI
27	ಹೊಸ ದಿಗಂತ	"	44	PI
28	ಪ್ರಜಾವಾಣಿ	ದಾವಣಗೆರೆ	21	FI
29	ನಂಯುಕ್ತ ಕರ್ನಾಟಕ	"	12	FI
30	ಜನತಾ ವಾಣಿ	"	15	FI
31	ನಗರವಾಣಿ	"	6	FI
32	ವಿಜಯ ಕರ್ನಾಟಕ ಗ್ರೂಪ್	ಚಿತ್ರದುರ್ಗ	36	FI
33	ಲೋಕಸ್ವಲ್ ದಿನವತ್ರಿಕೆ	ರಾಯಚೂರು	10	FI
34	ನಮಾಜ ವಿಕಾನ	"	35	FI
35	ನುದ್ದಿಮಾಲ ಪಬ್ಲಿಷರ್ ಇಂಡಿಯ ಲಿಮಿಟೆಡ್	"	32	FI
36	ವಾಣಿ ಸಾಮಾನ್ಯ ಕನ್ನಡ ಡೈರಿ	"	6	FI
37	ವೃತ್ತ ಮಂಜರಿ, ಹಿಂದಿ ವೃತ್ತ ಪತ್ರಿಕೆ	"	7	FI
38	ವಿಜಯ ಕರ್ನಾಟಕ	ಗಂಗಾವತಿ	27	FI
39	ನಾಗರೀಕ ದಿನಪತ್ರಿಕೆ	ಕೊಪ್ಪಳ	7	FI
40	ಪ್ರಜಾ ಪ್ರಪಂಚ	ಗಂಗಾವತಿ	3	FI
41	ಹಾನನ ಮಾಧ್ಯಮ	ಹಾಸನ	4	FI
42	ಜನತಾ ಮಾಧ್ಯಮ	"	8	PI
43	ಪ್ರತಿನಿಧಿ	"	4	PI
44	ಮಾರ್ಗ ಪ್ರಭ	"	2	PI

1	2	3	4	5
45	ಹಾಸನ ಮಿತ್ರ	"	2	PI
46	ವಿಜಯ ಕರ್ನಾಟಕ	"	47	PI
47	ಮಲ್ನಾಡು ಕೂಗು	"	2	PI
48	ಜ್ಞಾನದೀವ	"	2	PI
49	ನಾಡ ಸಹ್ಯಾದ್ರಿ	"	2	PI
50	ಜನಮಿತ್ರ	ಚಿಕ್ಕಮಗಳೂರು	3	PI
51	ಗಿರಿವಾರ್ತೆ	"	2	PI
52	ಕಾಂಪ್ಲೆಂಟ್ ನ್ಯೂಸ್	ಹಾಸನ	2	FI
53	ಮಾರ್ಗ ಪ್ರಭ	ಬೇಲೂರು	2	FI
54	ಮಲ್ನಾಡು ಸಂಗಾತಿ	ಹಾಸನ	2	PI
55	ಸುದ್ದಿಮಾಧ್ಯಮ	"	2	PI
56	ಮಲ್ನಾಡು ನಕ್ಷತ್ರ	"	2	PI
57	ಹೊಸ ಅಧ್ಯಾಯ	"	2	FI
58	ಶಕ್ತಿ ನ್ಯೂಸ್	ಕೊಡಗು	4	PI
59	ಕನ್ನಡಮ್ಮ	ಬೆಳಗಾಂ	37	PI
60	ತರುಣ್ ಭಾರತ್	"	77	PI
61	ಡೈಲಿ ವಾರ್ತಾ	"	25	PI
62	ರನ್‌ಜುನ್ ಜಾರ್	"	31	PI
63	ಎನ್‌ಎಡಿ	ಬಾಗಲಕೋಟೆ	6	PI
64	ನತ್ಯಾಶ್ರಯ	"	5	PI
65	ವಿದ್ಯಮಾನ್	"	12	PI
66	ವಿಜಯ ಕರ್ನಾಟಕ	"	34	FI

944 (1161) Sri Raghupathi Bhat (Udupi) Will the Minister for Women and Child Welfare be pleased to State?

a) Is there any intension before the Government to regularise the services of more than 40,000 Anganwadi workers presently functioning in the State,